सरयू

# ಸರಯೂ

ವಿದ್ಯಾಕೇಂದ್ರ ವಾರ್ತಾಪತ್ರ

ಸಂಪುಟ–2 ಸಂಚಿಕೆ 5 5114/ನಂದನ ಸಂ। ಆಷಾಢ/ಜುಲೈ 2012 ಪುಟಗಳು : 8


## ನಂದನ–ವಿಜಯಕ್ಕೆ ಸ್ವಾಗತ

**ಶ್ರೀರಾಮ** ವಿದ್ಯಾಕೇಂದ್ರ ಕಲ್ಲಡ್ಕ–ಕಳೆದ 32 ವರ್ಷಗಳಿಂದ ವಿದ್ಯಾದಾನದ ಕೆಲಸದಲ್ಲಿ ತನ್ನದೇ ಆದ ವಿಶೇಷತೆಯೊಂದಿಗೆ ಅನೇಕ ಗಣ್ಯರ–ವಿದ್ಯಾಭಿಮಾನಿಗಳ ಗಮನ ಸೆಳೆದ ಒಂದು ಮಾದರಿ ಶಿಕ್ಷಣ ಸಂಸ್ಥೆಯಾಗಿದೆ. 1980ರಿಂದ ಉಪೇಕ್ಷೆ ಹಾಗೂ ವಿರೋಧಗಳ ನಡುವೆ ಆರಂಭಗೊಂಡ ಶ್ರೀರಾಮ ವಿದ್ಯಾಕೇಂದ್ರ ಅವೆಲ್ಲಕ್ಕೂ ತನ್ನದೇ ಆದ ರೀತಿಯಲ್ಲಿ ಉತ್ತರ ನೀಡುತ್ತಾ ಇಂದು ಶಿಶುಮಂದಿರದಿಂದ ಪದವಿ ಹಂತದವರೆಗೆ ಬೆಳೆದು ನಿಂತಿದೆ. ಈ ಶೈಕ್ಷಣಿಕ ವರ್ಷದಲ್ಲಿ 1987ರಲ್ಲಿ ಪ್ರಾರಂಭಗೊಂಡ ಶಿಶುಮಂದಿರಕ್ಕೆ ರಜತ ಸಂಭ್ರಮ ವರ್ಷ. 10ನೇ ತರಗತಿಯವರೆಗೆ ಮಾತೃಭಾಷಾ (ಕನ್ನಡ) ಮಾಧ್ಯಮದಲ್ಲಿ ಶಿಕ್ಷಣ ನೀಡುತ್ತಾ ಬಂದಿರುವ ಈ ಸಂಸ್ಥೆ ಸಮಾಜದ ಎಲ್ಲ ವರ್ಗಗಳ ಮೆಚ್ಚುಗೆಗೆ ಪಾತ್ರವಾಗಿದೆ. ಶಿಕ್ಷಣದೊಂದಿಗೆ ಸಂಸ್ಕಾರವನ್ನು ಅಳವಡಿಸಿಕೊಂಡಿರುವ ನಮ್ಮ ನಿಲುವನ್ನು ಸಮಾಜ, ಸಮುದಾಯ ಸ್ವೀಕರಿಸುತ್ತಿರುವುದರ ಸಾಕ್ಷಿ ಈ ವರ್ಷದ ದಾಖಲಾತಿ. ಸಂಸ್ಥೆಗೆ ಪ್ರವೇಶವನ್ನು ಅಪೇಕ್ಷಿಸಿ ಬಂದವರೆಲ್ಲರನ್ನೂ ಸ್ವೀಕರಿಸುವುದು ನಮ್ಮ ವಿಶೇಷತೆ. ನಂದನ–ವಿಜಯದ ಈ ಶೈಕ್ಷಣಿಕ ವರ್ಷದಲ್ಲಿ ವಿವಿಧ ವಿಭಾಗಗಳಿಗೆ ಪ್ರವೇಶಾತಿ ಪಡೆದ ಹಾಗೂ ವಿವಿಧ ತರಗತಿಗಳಲ್ಲಿ ಅಧ್ಯಯನ ನಿರತರಾದ ಎಲ್ಲ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಶುಭವಾಗಲೆಂದು ಸರಯೂ ಆಶಿಸುತ್ತದೆ.

ಈ ವರ್ಷ (2012–13) ವಿದ್ಯಾಸಂಸ್ಥೆಯ ವಿವಿಧ ವಿಭಾಗಗಳಿಗೆ ದಾಖಲುಗೊಂಡ ವಿದ್ಯಾರ್ಥಿಗಳ ಅಂಕಿ ಅಂಶಗಳನ್ನು (ಪುಟ ಸಂಖ್ಯೆ 8ರಲ್ಲಿ) ತಮ್ಮೊಂದಿಗೆ ಹಂಚಿಕೊಳ್ಳಲು ಸಂತಸಪಡುತ್ತೇವೆ.

– **ಸಂಪಾದಕ ಮಂಡಳಿ**





**ಆಗತ ಸ್ವಾಗತ**







**ಶ್ರೀರಾಮ ವಿದ್ಯಾಕೇಂದ್ರ ಟ್ರಸ್ಟ್ (ರಿ.)**

ಹನುಮಾನ್ ನಗರ, ಕಲ್ಲಡ್ಕ, ಬಂಟ್ವಾಳ ತಾಲೂಕು, ದ.ಕ. 574 222. ದೂ. : 08255-275183
Email: info@srvk.org website: www.srvk.org Fax: 08255-275183




# ಸ್ವಾಮಿ ವಿವೇಕಾನಂದರ ಸ್ಫೂರ್ತಿಯ ನುಡಿಗಳು

- ಯಾವುದಕ್ಕೂ ಭಯಪಡಬೇಡಿ. ನೀವು ಅದ್ಭುತ ಕಾರ್ಯವನ್ನು ಮಾಡುವಿರಿ. ಹೆದರಿದ ಕ್ಷಣದಿಂದಲೇ ನೀವು ನಗಣ್ಯರಾಗುವಿರಿ. ಜಗತ್ತಿನಲ್ಲಿರುವ ದುಃಖಕ್ಕೆಲ್ಲಾ ಭಯವೇ ಮುಖ್ಯ ಕಾರಣ. ಎಲ್ಲಾ ಮೂಢನಂಬಿಕೆಗಳಲ್ಲಿ ಭಯವೇ ಹೆಚ್ಚಿನದು. ಭಯವೇ ಎಲ್ಲಾ ಸಂಕಟಗಳ ಮೂಲ. ನಿರ್ಭಯ ಎಲ್ಲಾ ಸುಖಗಳನ್ನೂ ತರಬಲ್ಲುದು. ಆದುದರಿಂದ ನಿರ್ಭೀತರಾಗಿ.

- ನೀವು ಏನನ್ನು ಯೋಚಿಸುತ್ತೀರೋ ಅದೇ ಆಗುವಿರಿ, ನೀವು ನಿಮ್ಮನ್ನು ದುರ್ಬಲರೆಂದು ಯೋಚಿಸಿದರೆ ದುರ್ಬಲರೇ ಆಗುವಿರಿ. ಶಕ್ತಿವಂತರೆಂದು ಯೋಚಿಸಿದರೆ ಶಕ್ತಿಶಾಲಿಗಳಾಗುವಿರಿ.

- ಎದ್ದುನಿಲ್ಲಿ, ಕೆಚ್ಚೆದೆಯವರಾಗಿ, ಬಲಿಷ್ಠರಾಗಿರಿ, ಸಂಪೂರ್ಣ ಜವಾಬ್ದಾರಿಯನ್ನು ನಿಮ್ಮ ಹೆಗಲಮೇಲೆ ತೆಗೆದುಕೊಳ್ಳಿ. ನಿಮ್ಮ ಭವಿಷ್ಯದ ನಿರ್ಮಾಪಕರು ನೀವೇ ಎಂದು ತಿಳಿಯಿರಿ.

- ನಿಮ್ಮ ಶಕ್ತಿಯ ಮೇಲೆಯೇ ನೀವು ನಿಲ್ಲಬೇಕು. ಮತ್ತು ಮಡಿಯಬೇಕು. ಈ ಜಗತ್ತಿನಲ್ಲಿ ಪಾಪವೆಂಬುವುದು ಏನಾದರೂ ಇದ್ದರೆ ಅದೇ ದೌರ್ಬಲ್ಯ. ಎಲ್ಲಾ ರೀತಿಯ ಹೇಡಿತನವನ್ನು ತಡೆಯಿರಿ. ಏಕೆಂದರೆ ದೌರ್ಬಲ್ಯವೇ ಪಾಪ, ದೌರ್ಬಲ್ಯವೇ ಮರಣ.

- ಎಲ್ಲಾ ಸಾಮರ್ಥ್ಯವೂ ನಿಮ್ಮಲ್ಲೇ ಇದೆ. ನೀವು ಏನನ್ನೂ ಮತ್ತು ಎಲ್ಲವನ್ನು ಸಾಧಿಸಬಹುದು. ಇದನ್ನು ನಂಬಿ. ಬಲಾಢ್ಯರೆಂದು ತಿಳಿಯಿರಿ, ಎದ್ದುನಿಂತು ನಿಮ್ಮಲ್ಲಿರುವ ದೈವತ್ವವನ್ನು ವ್ಯಕ್ತಗೊಳಿಸಿ.

## "ಸರಯೂ" ಸಂಪಾದಕ ಮಂಡಳಿ

**ಸಂಪಾದಕರು, ಮುದ್ರಕರು ಹಾಗೂ ಪ್ರಕಾಶಕರು :**
ನಾರಾಯಣ ಸೋಮಯಾಜಿ, ಅಧ್ಯಕ್ಷರು, ಶ್ರೀರಾಮ ವಿದ್ಯಾಕೇಂದ್ರ
**ಸಹಸಂಪಾದಕರು :**
ದಿವ್ಯಾ ಕುಮಾರಿ, ಸುಮಿತ್ರಾ ಎಸ್.ಜಿ., ಮೃದುಲಾ ಹೆಗ್ಡೆ,
ಮಹೇಶ ನೆಟ್ಲ, ಶಕೀಲಾ ಕುಮಾರಿ, ಜಯಾನಂದ ಪೆರಾಜೆ
**ವ್ಯವಸ್ಥಾಪಕ ಸಂಪಾದಕರು :**
ಸತೀಶ ಭಟ್, ಶಿವಗಿರಿ
**ಕಾರ್ಯನಿರ್ವಾಹಕ ಸಂಪಾದಕರು :**
ಕೃಷ್ಣಪ್ರಸಾದ ಕಾಯರ್‌ಕಟ್ಟೆ
**ವಿನ್ಯಾಸ :**
ಕುಶಾಲಪ್ಪ ಅಮ್ಚೂರು

ಚಿಂತನರಶ್ಮಿ

# ಗುರುವಿನ ಮಾಂತ್ರಿಕ ಸ್ಪರ್ಶ

ಅದೊಂದು ಹರಾಜಿನ ಮನೆ. ಅಲ್ಲಿ ವಿಶೇಷವಾದ, ಚಿತ್ರ ವಿಚಿತ್ರವಾದ,ಪುರಾತನವಾದ ವಸ್ತುಗಳನ್ನು ಹರಾಜು ಹಾಕುತ್ತಾರೆ. ಇಂಥ ದಿನ, ಇಂಥ ವಸ್ತುಗಳನ್ನು ಹರಾಜು ಹಾಕುವುದೆಂದು ತೀರ್ಮಾನ ಮಾಡಿ ವರ್ತಮಾನ ಪತ್ರಿಕೆಗಳಲ್ಲಿ ಪ್ರಚಾರ ಮಾಡುತ್ತಾರೆ. ಆ ದಿನ ಆಸಕ್ತ ಜನ ಬಂದು ಸೇರುತ್ತಾರೆ. ಹರಾಜು ಮಾಡುವವನು ಒಂದೊಂದೇ ವಸ್ತುವನ್ನು ಎತ್ತರದ ಸ್ಥಳದ ಮೇಲೆ ಎಲ್ಲರಿಗೂ ಕಾಣುವಂತೆ ಇರಿಸಿ ಈ ವಸ್ತುವಿನ ಹರಾಜು ಪ್ರಾರಂಭವಾಗಲಿದೆ ಎಂದು ಘೋಷಿಸುತ್ತಾನೆ. ನಂತರ ವಸ್ತುವಿನ ಅತೀ ಕಡಿಮೆ ಬೆಲೆ ಎಷ್ಟು ಎಂದು ತಿಳಿಸಿ, ಇದಕ್ಕಿಂತ ಹೆಚ್ಚು ಬೆಲೆಯನ್ನು ಯಾರು ಹೇಳುತ್ತಾರೋ ಅವರಿಗೆ ಆ ವಸ್ತು ದೊರೆಯುತ್ತದೆ ಎಂದು ತಿಳಿಸುತ್ತಾನೆ. ಆಗ ಪ್ರಾರಂಭವಾಗುತ್ತದೆ ಹರಾಜು. ಹೆಚ್ಚಿನ ಬೆಲೆ ಬರಲಾರದೆಂದು ಹರಾಜಿನವನಿಗೆ ಎನ್ನಿಸಿದರೆ ಸುತ್ತಿಗೆಯಿಂದ ಮೇಜಿನ ಮೇಲೆ ಮೂರು ಬಾರಿ ಕುಟ್ಟಿ, ಈ ವಸ್ತು ಮಾರಾಟವಾಯಿತೆಂದು ಘೋಷಿಸುತ್ತಾನೆ. ಅಲ್ಲಿಗೆ ಆ ವಸ್ತುವಿನ ಮಾರಾಟ ಮುಗಿಯಿತು.

ಒಂದು ದಿನ ಹರಾಜಿನ ಅಂಗಡಿಯಲ್ಲಿ ವಸ್ತುಗಳ ಹರಾಜು ನಡೆದಿತ್ತು. ಅಲ್ಲಿದ್ದ ಎಲ್ಲ ವಸ್ತುಗಳನ್ನು ಮಾರಿದ ಮೇಲೆ ಮತ್ತೇನಾದರೂ ಉಳಿದಿದೆಯೊ ಎಂದು ತಿರುಗಿ ನೋಡಿದ ಮಾಲಿಕ. ಅಲ್ಲೊಂದು ಹಳೆಯ ಪಿಟೀಲು ಬಿದ್ದಿದೆ. ಅದನ್ನಾರು ಕೊಂಡಾರು ಎಂದು–ಕೊಂಡ ಆತ. ಆದರೆ ಇಟ್ಟೇನು ಮಾಡುವುದು? ಬಂದಷ್ಟು ದುಡ್ಡು ಬರಲಿ ಹರಾಜು ಹಾಕಿಬಿಡುತ್ತೇನೆ ಎಂದು ಆ ಪಿಟೀಲನ್ನು ಎಡಗೈಯಿಂದ ಮೇಲಕ್ಕೆತ್ತಿ ಹೇಳಿದ. "ಸ್ನೇಹಿತರೇ ಇದೊಂದು ಹಳೆಯ ಪಿಟೀಲು ಇದಕ್ಕೆಷ್ಟು ಹಣ ನೀಡುತ್ತೀರಿ?" ಒಂದು ನಿಮಿಷ ಮೌನ ಆವರಿಸಿತ್ತು. ಎರಡು ನಿಮಿಷಗಳ ನಂತರ ಒಬ್ಬ ಕೂಗಿದ "ಒಂದು ರೂಪಾಯಿ". ಒಂದು ರೂಪಾಯಿಯೇ? ಯಾರಾದರೂ ಬೆಲೆ ಹೆಚ್ಚಿಸಬಹುದೇ?" ಎಂದು ಕೇಳಿದ ಮಾಲಿಕ. "ಆಯ್ತು,ಎರಡು ರೂಪಾಯಿ" ಎಂದ ಮತ್ತೊಬ್ಬ."ದಯವಿಟ್ಟು ಮತ್ತಷ್ಟು ದರ ಏರಿಸಿ. ಅದು ಒಳ್ಳೆಯ ಪಿಟೀಲು" ಎಂದು ಕೇಳಿಕೊಂಡ ಮಾಲಿಕ. "ಸರಿ, ಮೂರು ರೂಪಾಯಿ" ಎಂದು ಇನ್ನೊಬ್ಬ ಕೂಗಿದ. ಆಮೇಲೆ ಯಾರೂ ಬೆಲೆ ಏರಿಸಲಿಲ್ಲ. "ಮೂರು ರೂಪಾಯಿಯಾದರೂ ಸರಿ, ಇದನ್ನಿಟ್ಟುಕೊಂಡು ಏನು ಮಾಡುವುದು?" ಎಂದುಕೊಂಡು ಮಾಲಿಕ ಸುತ್ತಿಗೆ ಎತ್ತಿ "ಮೂರು ರೂಪಾಯಿ ಒಂದು ಸಲ, ಮೂರು ರೂಪಾಯಿ ಎರಡು ಸಲ" ಎಂದು ಇನ್ನೇನು ಮೂರನೇ ಬಾರಿ ಕೂಗಿ ಸುತ್ತಿಗೆಯಿಂದ ಮೇಜನ್ನು ಕುಟ್ಟಬೇಕು ಎನ್ನುವಷ್ಟರಲ್ಲಿ ಕೋಣೆಯಲ್ಲಿ ಹಿಂದೆ ಕುಳಿತಿದ್ದ ಹಿರಿಯರೊಬ್ಬರು ಮೇಲೆದ್ದು, "ಒಂದು ನಿಮಿಷ ಇರಿ" ಎಂದು ಮುಂದೆ ಬಂದು ಆ ಪಿಟೀಲನ್ನು ಕೈಯಲ್ಲಿ ತೆಗೆದುಕೊಂಡರು. ಜೇಬಿನಿಂದ ವಸ್ತ್ರ ತೆಗೆದು ಅದನ್ನು ಚೆನ್ನಾಗಿ ಒರೆಸಿ, ತಂತಿಗಳನ್ನು ಬಿಗಿ ಮಾಡಿ,ಹೆಗಲ ಮೇಲಿಟ್ಟುಕೊಂಡು ಅತ್ಯಂತ ಮಧುರವಾದ ಸ್ವರವನ್ನು ನುಡಿಸಿದರು. ನಂತರ ಅದನ್ನು ಕೆಳಗಿಟ್ಟು ಮತ್ತೊಮ್ಮೆ ಹರಾಜು ಮಾಡಲು ಹೇಳಿ, ತಮ್ಮ ಸ್ಥಳಕ್ಕೆ ಹೋಗಿ ಕುಳಿತರು. ಮಾಲಿಕ ಏನೂ ತೋಚದೇ ಪಿಟೀಲನ್ನು ಎತ್ತಿ "ಎಷ್ಟು ಕೊಡುತ್ತೀರಿ ಈ ಪಿಟೀಲಿಗೆ?" ಎಂದ. ತಕ್ಷಣ ಒಬ್ಬರು ಕೂಗಿದರು "ಸಾವಿರ ರೂಪಾಯಿ", ಮತ್ತೊಬ್ಬರು "ಎರಡು ಸಾವಿರ" ಎಂದರು. ಮಗದೊಬ್ಬರು "ಮೂರು ಸಾವಿರ" ಎಂದರು. ಅದು ಮೂರು ಸಾವಿರಕ್ಕೆ ಮಾರಾಟವಾಯಿತು. ಜನರಿಗೆಲ್ಲ ಆಶ್ಚರ್ಯ! "ಹತ್ತು ನಿಮಿಷದ ಕೆಳಗೆ ಮೂರು ರೂಪಾಯಿಗಿಂತ ಹೆಚ್ಚು ಬೆಲೆ ಬಾಳದ ಪಿಟೀಲಿನ ಬೆಲೆ ಒಮ್ಮೆಲೇ ಹೆಚ್ಚಾದದ್ದು ಹೇಗೆ?" ಎಂದೊಬ್ಬ ಕೇಳಿದ. ತಕ್ಷಣ ಮತ್ತೊಬ್ಬ ಉತ್ತರಿಸಿದ "ಅದು ಗುರುವಿನ ಮಾಂತ್ರಿಕ ಸ್ಪರ್ಶದಿಂದ".

ನಮ್ಮ ಜೀವನ ಕೂಡ ಆ ಪಿಟೀಲಿನಂತೆ ಬೆಲೆಯಿಲ್ಲದೇ ಕಳೆದುಹೋಗುತ್ತಿರುವಾಗ ಯಾವುದೋ ರೂಪದಲ್ಲಿ ಗುರುವೊಬ್ಬ ಬಂದು ಅದರ ದಿಶೆಯನ್ನು, ಗತಿಯನ್ನು ಬದಲಾಯಿಸಿಬಿಡುತ್ತಾನೆ. ಅದಕ್ಕೆ ನಾವು ಮನಸ್ಸನ್ನು ಸಿದ್ಧವಾಗಿಟ್ಟುಕೊಂಡಿರಬೇಕು ಅಷ್ಟೇ. ■

# ಶಿಶುಮಂದಿರ ವಿಭಾಗ



## ಪೋಷಕರ ಸಮಾವೇಶ :

ದಿನಾಂಕ: 21–06–2012ರ ಗುರುವಾರದಂದು ಶಿಶುಮಂದಿರದ ಮಕ್ಕಳ ಪೋಷಕರ ಸಭೆ ನಡೆಯಿತು. ಈ ವರ್ಷ ಒಟ್ಟು ಮಕ್ಕಳ ಸಂಖ್ಯೆ 87. 7 ಜನ ಜೋಡಿ ಪಾಲಕರು (ಅಪ್ಪ ಅಮ್ಮ), ಒಟ್ಟು 78 ಹೆತ್ತವರು, 6 ಆಡಳಿತ ಮಂಡಳಿ ಸದಸ್ಯರು ಸೇರಿ 84 ಜನ ಈ ಸಭೆಯಲ್ಲಿ ಭಾಗವಹಿಸಿದ್ದರು. ಶ್ರೀಯುತ ಡಾ| ಪ್ರಭಾಕರ ಭಟ್ ಇವರು ಮಾರ್ಗದರ್ಶಕರಾಗಿ ಆಗಮಿಸಿ, ಹಿಂದಿನ ವರ್ಷದ ಮಕ್ಕಳ ಬೆಳವಣಿಗೆ, ಇಂದಿನ ಶಿಕ್ಷಣದಿಂದಾದ ಬದಲಾವಣೆ ಈ ವಿಷಯದಲ್ಲಿ ಪಾಲಕರಲ್ಲಿ ಅಭಿಪ್ರಾಯ ಕೇಳಿದರು. ಈ ವರ್ಷ ಸೇರಿಸಿದವರ ಉದ್ದೇಶ ಏನು? ಇಷ್ಟು ಆಂಗ್ಲ ಮಾಧ್ಯಮ ಪ್ರಭಾವ ಇದ್ದರೂ ನೀವು ಕಳಿಸಿದ್ದೀರಿ ಯಾಕಾಗಿ ? ಎಂಬ ಪ್ರಶ್ನೆಗೆ ಒಳ್ಳೆಯ ಸಂಸ್ಕಾರ ಕಲಿಯಲು, ಉಚ್ಚಾರಣೆ ಶುದ್ಧವಾಗಲು ಅಲ್ಲದೆ ಇಲ್ಲಿ ದೇವರ ನಾಮ, ಒಳ್ಳೆಯ ವಿಷಯ ಸಿಗುತ್ತದೆ ಎಂದು ಅನೇಕರು ಅಭಿಪ್ರಾಯ ವ್ಯಕ್ತಪಡಿಸಿದರು. ನಂತರ ಹಿರಿಯರು ಶಿಶುಮಂದಿರ ಆರಂಭದ ಉದ್ದೇಶ, ತಜ್ಞರ ಚಿಂತನೆ, ಮಕ್ಕಳ ಬೆಳವಣಿಗೆ ಶಿಕ್ಷಣ, ದೈಹಿಕ, ಮಾನಸಿಕ, ಶಾರೀರಿಕ, ಭಾಷೆ, ಗಣಿತ, ವಿಜ್ಞಾನ ಈ ವಿಷಯಗಳ ಬಗ್ಗೆ ಮಗುವಿನಲ್ಲಿ ಆಗುತ್ತಿರುವ ವಿಕಾಸದ ಬಗ್ಗೆ ವಿವರಿಸಿದರು. ಈ ಶಿಕ್ಷಣದಿಂದ ಸಮಾಜದಲ್ಲಿ ಒಬ್ಬ ಒಳ್ಳೆ ನಾಗರಿಕನಾಗಿ ಬದುಕಲು ನಾವು ಸಹಕಾರ ನೀಡುತ್ತಿದ್ದೇವೆ ಎಂದು ಅನೇಕ ಉದಾಹರಣೆಯೊಂದಿಗೆ ತಿಳಿಸಿದರು. ಶಾಂತಿ ಮಂತ್ರದೊಂದಿಗ ಸಭೆ ಮುಕ್ತಾಯವಾಯಿತು.

# ಪ್ರಾಥಮಿಕ ಶಾಲಾ ವಿಭಾಗ




## ಹಿಂದೂ ಸಾಮ್ರಾಜ್ಯದಿನೋತ್ಸವ :

09–06–2012 ರಂದು ಶ್ರೀರಾಮ ಹಿರಿಯ ಪ್ರಾಥಮಿಕ ಶಾಲೆ ಕಲ್ಲಡ್ಕ ಇಲ್ಲಿಯ ವೇದವ್ಯಾಸ ಧ್ಯಾನಮಂದಿರದಲ್ಲಿ ಹಿಂದೂ ಸಾಮ್ರಾಜ್ಯ ದಿನೋತ್ಸವ ಕಾರ್ಯಕ್ರಮ ನಡೆಯಿತು. ವೇದಿಕೆಯಲ್ಲಿ ಶಾಲಾಭಿವೃದ್ಧಿ ಸಮಿತಿಯ ಸದಸ್ಯರಾದ ಜಯರಾಮ ರೈ, ರಾಷ್ಟ್ರೀಯ ಸ್ವಯಂಸೇವಕ ಸಂಘದ ಕಾರ್ಯಕರ್ತರಾದ ನಾರಾಯಣ ಭಂಡಾರಿ ಹಾಗೂ ಮುಖ್ಯೋಪಾಧ್ಯಾಯರು ಉಪಸ್ಥಿತರಿದ್ದರು. ಉಪಸ್ಥಿತರಿದ್ದ ಸರ್ವರನ್ನು ಶೈನಿ ಮಾತಾಜಿ ಸ್ವಾಗತಿಸಿದರು. ಮೊಘಲರ ಧಾಳಿಯಿಂದ ಭಾರತವನ್ನು ರಕ್ಷಿಸಿ, ಹಿಂದೂ ಸಾಮ್ರಾಜ್ಯದ ಸ್ಥಾಪನೆಗೆ ಕಾರಣನಾದ ಶಿವಾಜಿ ಮಹಾರಾಜರ ಸಾಧನೆ, ಸಾಹಸಗಳನ್ನು ತಿಳಿಸುವುದರ ಮೂಲಕ ನಾರಾಯಣ ಭಂಡಾರಿ ಇವರು ಬೌದ್ಧಿಕ್ ನಡೆಸಿಕೊಟ್ಟರು. ಪ್ರೀತಾ ಮಾತಾಜಿ ನಿರೂಪಿಸಿ ಹೇಮಲತಾ ಮಾತಾಜಿ ವಂದಿಸಿದರು.



## ಗಣಕ ವಿಭಾಗ ಉದ್ಘಾಟನೆ:

ಶ್ರೀರಾಮ ವಿದ್ಯಾಕೇಂದ್ರ ಕಲ್ಲಡ್ಕ ಇಲ್ಲಿಯ ಪ್ರಾಥಮಿಕ ಶಾಲೆಯ ಗಣಕಯಂತ್ರ ವಿಭಾಗದ ಉದ್ಘಾಟನೆಯು ದಿನಾಂಕ 22.06.2012ರಂದು ನಡೆಯಿತು.

ಕುಡ್ವಿ ಜಗದೀಶ್ ಶೆಣೈ, ಆಡಳಿತ ನಿರ್ದೇಶಕರು ನ್ಯೂ ತಾಜ್ ಮಹಲ್ ಗ್ರೂಪ್ ಮಂಗಳೂರು ಇವರು ದೀಪ ಪ್ರಜ್ವಲನ ಮಾಡುವುದರ ಮೂಲಕ ಉದ್ಘಾಟನೆ ಮಾಡಿ ಶುಭ ಹಾರೈಸಿದರು. ಕಾರ್ಯಕ್ರಮದಲ್ಲಿ ವಿದ್ಯಾಕೇಂದ್ರ ಸಂಚಾಲಕರಾದ ಡಾ| ಪ್ರಭಾಕರ ಭಟ್ ಕಲ್ಲಡ್ಕ, ಡಾ| ಕಮಲಾ ಪ್ರ.ಭಟ್, ವಿದ್ಯಾಕೇಂದ್ರದ ಅಧ್ಯಕ್ಷರಾದ ಶ್ರೀಯುತ ನಾರಾಯಣ ಸೋಮಯಾಜಿ, ರಾಷ್ಟ್ರೀಯ ಸ್ವಯಂಸೇವಕ ಸಂಘದ ಬೆಂಗಳೂರು ಮಹಾನಗರದ ಸಹ ಸಂಪರ್ಕ ಪ್ರಮುಖ್ ಶ್ರೀಯುತ ಪ್ರಸನ್ನ ಕುಮಾರ್ ಎಂ. ಆರ್., ಉದ್ಯಮಿಗಳಾದ ರಾಜಶೇಖರ್ ಕೇಕಣಾಜೆ, ಎಲ್. ಕೆ ಲಿಂಗರಾಜ್, ಪ್ರಾಥಮಿಕ ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷರಾದ ಶ್ರೀಯುತ ಶಿವಗಿರಿ ಸತೀಶ್ ಭಟ್ ಹಾಗೂ ಸದಸ್ಯರು ಉಪಸ್ಥಿತರಿದ್ದರು.



**ಆಗತ–ಸ್ವಾಗತ :**

ಶ್ರೀರಾಮ ಹಿರಿಯ ಪ್ರಾಥಮಿಕ ಶಾಲಾ ಒಂದನೇ ತರಗತಿ ಪುಟಾಣಿಗಳ ಆಗತ–ಸ್ವಾಗತ ಕಾರ್ಯಕ್ರಮವು ಕಲಿಯುಗಾಬ್ಧ 5113 ನಂದನ ನಾಮ ಸಂವತ್ಸರ ದಕ್ಷಿಣಾಯನ ಗ್ರೀಷ್ಮ ಋತುವಿನ ಆಷಾಢ ಶುದ್ಧ ತದಿಗೆಯ ಶುಕ್ರವಾರದಂದು ವೇದವ್ಯಾಸ ಧ್ಯಾನ ಮಂದಿರದಲ್ಲಿ ನಡೆಯಿತು.

ಶ್ರೀಯುತ ಕುಡ್ವಿ ಜಗದೀಶ್ ಶೆಣೈ ಕಾರ್ಯಕ್ರಮದ ಉದ್ಘಾಟನೆಯನ್ನು ಮಾಡುವುದರ ಜೊತೆಗೆ ಅತಿಥಿಗಳು ಭಾರತಮಾತೆ ಮತ್ತು ವಿವೇಕಾನಂದರ ಭಾವಚಿತ್ರಕ್ಕೆ ಪುಷ್ಪಾರ್ಚನೆಗೈದು ವೇದಿಕೆಯನ್ನು ಅಲಂಕರಿಸಿದರು.

ನೂತನ ಪುಟಾಣಿಗಳಿಗೆ ಗುರುವೃಂದದವರು ಆರತಿ ಅಕ್ಷತೆ, ತಿಲಕಧಾರಣೆಯನ್ನು ಮಾಡುವುದರ ಜೊತೆಗೆ ಪುಟಾಣಿಗಳು ಯಜ್ಞಕುಂಡಕ್ಕೆ ಘೃತಾಹುತಿಯನ್ನಿತ್ತು ಹಿರಿಯರಿಂದ ಆಶೀರ್ವಾದವನ್ನು ಪಡೆದರು.

ಕಾರ್ಯಕ್ರಮದಲ್ಲಿ ಶ್ರೀಯುತ ಪ್ರಭಾಕರ ಭಟ್ ಕಲ್ಲಡ್ಕ ಪ್ರಾಸ್ತಾವಿಕ ಮಾತುಗಳನ್ನಾಡಿ ಶಿಕ್ಷಣದಿಂದ ಕೇವಲ ವಿದ್ಯಾವಂತರಾದರೆ ಸಾಲದು ಮಗುವಿನ ಅಡಿಪಾಯ ಗಟ್ಟಿಯಾಗಿರಬೇಕು ಅದಕ್ಕಾಗಿ ಉತ್ತಮ ಮೌಲ್ಯಾಧಾರಿತ ಶಿಕ್ಷಣವು ಮಗುವಿಗೆ ಕನ್ನಡ ಭಾಷೆಯಲ್ಲಿ (ಮಾತೃಭಾಷೆಯಲ್ಲೇ) ಸಿಗಬೇಕು ಎಂದು ನುಡಿದರು.

ಉದ್ಘಾಟನೆಯನ್ನು ಮಾಡಿದ ಶ್ರೀಯುತ ಕುಡ್ವಿ ಜಗದೀಶ್ ಶೆಣೈ (ಆಡಳಿತ ನಿರ್ದೇಶಕರು, ನ್ಯೂ ತಾಜ್‌ಮಹಲ್ ಗ್ರೂಪ್ ಮಂಗಳೂರು) ಇವರು ಮಾತನಾಡಿ ಈ ಶಾಲೆಗೆ ಭೇಟಿ ನೀಡಿ, ಕಾರ್ಯಕ್ರಮದಲ್ಲಿ ಭಾಗವಹಿಸಿ, ಹೊಸದೊಂದು ಲೋಕವನ್ನು ಕಂಡಂತಾಯಿತು ಎಂದು ಸಂತೋಷ ವ್ಯಕ್ತಪಡಿಸಿದರು.

ಶ್ರೀಯುತ ಪ್ರಸನ್ನ ಕುಮಾರ್ ವಿದ್ಯಾರ್ಥಿಗಳಿಗೆ ಶುಭಹಾರೈಸಿದರು. ವೇದಿಕೆಯಲ್ಲಿ ಉದ್ಯಮಿಗಳಾದ ರಾಜಶೇಖರ್ ಕೇಕಣಾಜೆ, ಲಿಂಗರಾಜ್ ಎಲ್.ಕೆ. ಡಾ। ಕಮಲಾ ಪ್ರ.ಭಟ್, ನಾರಾಯಣ ಸೋಯಾಜೆ, ವೇದಿಕೆಯಲ್ಲಿ ಉಪಸ್ಥಿತರಿದ್ದರು ಶಿವಗಿರಿ ಸತೀಶ್ ಭಟ್ ಸ್ವಾಗತಿಸಿ ಮುಖ್ಯೋಪಾಧ್ಯಾಯರಾದ ರವಿರಾಜ್ ಧನ್ಯವಾದಗೈದರು. ಪ್ರೇಮ ಮಾತಾಜಿ ನಿರೂಪಿಸಿದರು. ಪೋಷಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

# ಪ್ರೌಢಶಾಲಾ ವಿಭಾಗ



**ಹಿಂದೂ ಸಾಮ್ರಾಜ್ಯದಿನೋತ್ಸವ**

ದಿನಾಂಕ 05–06–2012 ರಂದು ಶ್ರೀರಾಮ ಪ್ರೌಢಶಾಲಾ ವಿಭಾಗದ ಹಿಂದೂ ಸಾಮ್ರಾಜ್ಯ ದಿನೋತ್ಸವವನ್ನು ಮಧುಕರ ಸಭಾಂಗಣದಲ್ಲಿ ಆಚರಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷ ಸ್ಥಾನವನ್ನು ಮುಖ್ಯೋಪಾಧ್ಯಾಯರಾದ ವಸಂತ ಮಾಧವ ವಹಿಸಿದರು.

ಕಲಾಶಿಕ್ಷಕ ಜಿನ್ನಪ್ಪ ಈ ಕಾರ್ಯಕ್ರಮದ ಮಹತ್ವದ ಕುರಿತು ಮಾತನಾಡಿ ಛತ್ರಪತಿ ಶಿವಾಜಿ ಮಹಾರಾಜರ ಜೀವನ ಸಾಧನೆಯನ್ನು ಉಲ್ಲೇಖಿಸುತ್ತಾ ಅವರೊಬ್ಬ ಯೋಗಿ ಮತ್ತು ಯೋಧ ಹಾಗೆಯೇ ಮಹಾನ್ ಪುರುಷ ಎಂದರು. ನಂದಿತಾ ಸ್ವಾಗತಿಸಿ, ನಿರೀಕ್ಷಾ ಧನ್ಯವಾದಗೈದು, ಲಾವಣ್ಯ ನಿರೂಪಿಸಿದರು.




**ವಿದ್ಯಾರ್ಥಿ ಸಂಸತ್ತು :**

ವಿದ್ಯಾರ್ಥಿ ಸಂಸತ್ತಿನ ಪ್ರಮಾಣ ವಚನ ಸ್ವೀಕಾರ ಸಮಾರಂಭ 25–06–2012 ಸೋಮವಾರದಂದು ನಡೆಯಿತು. ವಿದ್ಯಾರ್ಥಿಗಳು ಪ್ರಮಾಣ ವಚನ ಸ್ವೀಕರಿಸಿದ ನಂತರ ಮುಖ್ಯೋಪಾಧ್ಯಾಯರಾದ ಶ್ರೀಯುತ ವಸಂತ ಮಾಧವ ಮಾತನಾಡಿ "ಶಾಲಾ ಕೆಲಸಗಳು ಸುಸೂತ್ರವಾಗಿನಡೆಯಬೇಕಾದರೆ ವಿದ್ಯಾರ್ಥಿ ಸಂಸತ್ತಿನ ಪಾತ್ರ ಮುಖ್ಯವಾದುದು. ರಾಷ್ಟ್ರೀಯ ಪರಿಕಲ್ಪನೆಯ ದೃಷ್ಟಿಯಿಂದ ಪ್ರತಿಯೊಬ್ಬ ಪ್ರಜೆಗೂ ಮಹತ್ತರ ಜವಾಬ್ದಾರಿ ಇದೆ. ಅದಕ್ಕಾಗಿ ರಾಷ್ಟ್ರದ ಬಗೆಗೆ ಚಿಂತನೆಯನ್ನು ಮಾಡಬೇಕು" ಎಂದರು.

ಜೀವನದ ಹಾದಿಯಲ್ಲಿ ಸರಿಯಾದ ಹೆಜ್ಜೆ ಇಡಬೇಕಾದರೆ ಗುರುಗಳ ಮಾರ್ಗದರ್ಶನ, ತಾಯಿ ಭಾರತಾಂಬೆಯ ಆಶೀರ್ವಾದ ಮುಖ್ಯ ಎಂದು ಅತಿಥಿಗಳಾಗಿ ಆಗಮಿಸಿದ ಶ್ರೀರಾಮ ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀಯುತ ರವಿರಾಜ್ ಹೇಳಿದರು. ಶಿಕ್ಷಕ ಕೊಟ್ರೇಶಪ್ಪ ಕಾರ್ಯಕ್ರಮ ನಿರೂಪಿಸಿದರು.




### ಪ್ರೌಢಶಾಲಾ ವಿದ್ಯಾರ್ಥಿಗಳ ಆಗತ – ಸ್ವಾಗತ ಕಾರ್ಯಕ್ರಮ

ಪ್ರೌಢಶಾಲಾ ವಿದ್ಯಾರ್ಥಿಗಳ ಆಗತ–ಸ್ವಾಗತ ಕಾರ್ಯಕ್ರಮದಲ್ಲಿ ಮುಖ್ಯ ಆತಿಥಿಯಾಗಿ ಆಗಮಿಸಿದ ಮಂಗಳೂರಿನ ಉದ್ಯಮಿ ಮನೋಜ್‌ಶೆಟ್ಟಿ ಇವರು "ಬಾಯಿಪಾಠ ಮಾಡಿ ಅಂಕಗಳಿಸುವ ಶಿಕ್ಷಣದ ಬದಲು ಜೀವನದಲ್ಲಿ ಅನ್ವಯಿಸಿಕೊಳ್ಳುವ ಶಿಕ್ಷಣ ಇಂದಿನ ಅಗತ್ಯ" ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಮಂಗಳೂರು ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯದ ಉಪನ್ಯಾಸಕ ಡಾ। ಚಂದ್ರೇಗೌಡ, ಮೆಸ್ಕಾಂನ ಆಡಳಿತ ನಿರ್ದೇಶಕ ಶ್ರೀ ವಿಜಯನರಸಿಂಹ, ವೆನ್‌ಲಾಕ್ ಆಸ್ಪತ್ರೆಯ ಜಿಲ್ಲಾ ಸರ್ಜನ್ ಡಾ। ಸರೋಜ, ಶ್ರೀಮತಿ ನೇತ್ರಾವತಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು.

ವಿದ್ಯಾಕೇಂದ್ರದ ಸಂಚಾಲಕ ಡಾ। ಪ್ರಭಾಕರ ಭಟ್ ಪ್ರಾಸ್ತಾವಿಕ ಭಾಷಣ ಮಾಡಿ ಇಂದು ಗುಣವಂತರ ನಿರ್ಮಾಣ ಶಾಲೆಯಿಂದ ನಡೆಯಬೇಕಾಗಿದೆ. ಭಾರತಮಾತೆಯ ಆರಾಧನೆಯೊಂದಿಗೆ ಮಕ್ಕಳಲ್ಲಿ ರಾಷ್ಟ್ರೀಯ ಜಾಗೃತಿ ಮೂಡಿಸುವ ಕೆಲಸ ಭಾರತೀಯ ಸಂಸ್ಕೃತಿಯ ಶಿಕ್ಷಣದಿಂದ ಸಾಧ್ಯವಾಗುವುದು ಎಂದರು.

ವಿದ್ಯಾಕೇಂದ್ರದ ಅಧ್ಯಕ್ಷ ಶ್ರೀ ಬಿ. ನಾರಾಯಣ ಸೋಮಯಾಜಿ, ಡಾ। ಕಮಲಾ ಪ್ರಭಾಕರ ಭಟ್, ಮುಖ್ಯೋಪಾಧ್ಯಾಯ ಶ್ರೀ ವಸಂತಮಾಧವ, ಪ್ರೌಢಶಾಲಾ ಅಭಿವೃದ್ಧಿ ಸಮಿತಿ ಅಧ್ಯಕ್ಷ ಶ್ರೀ ವಿಶ್ವನಾಥ ಪ್ರಭು ಉಪಸ್ಥಿತರಿದ್ದರು.

ನೂತನವಾಗಿ ಸೇರ್ಪಡೆಗೊಂಡ 325 ವಿದ್ಯಾರ್ಥಿಗಳು ಭಾರತಮಾತೆಗೆ ಪುಷ್ಪಾರ್ಚನೆ ಮಾಡಿ, ಹಿರಿಯರಿಂದ ತಿಲಕಧಾರಣೆ ಮಾಡಿಕೊಂಡು ಆಶೀರ್ವಾದ ಪಡೆದುಕೊಂಡರು

ಜಯಾನಂದ ಪೆರಾಜೆ ಸ್ವಾಗತಿಸಿ, ನವಿತಾ ಮಾತಾಜಿ ನಿರೂಪಿಸಿ, ಶೋಭಾ ಮಾತಾಜಿ ವಂದಿಸಿದರು.

# ಪದವಿಪೂರ್ವ ವಿಭಾಗ




### ಭೂಮಿಕಾ ಪರಿಸರ ಸಂಘ ಉದ್ಘಾಟನೆ

ವಿಶ್ವ ಪರಿಸರ ದಿನದ ಅಂಗವಾಗಿ ಜೂನ್ 5 ರಂದು ಶ್ರೀರಾಮ ಪ.ಪೂ.ವಿದ್ಯಾಲಯದಲ್ಲಿ **ಭೂಮಿಕಾ ಪರಿಸರ ಸಂಘ**ವನ್ನು ತುಳಸೀ ಗಿಡಕ್ಕೆ ನೀರೆರೆಯುವುದರ ಮೂಲಕ ಉದ್ಘಾಟಿಸಲಾಯಿತು. ವಿವೇಕಾನಂದ ಪದವಿ ಕಾಲೇಜಿನ ಸಂಸ್ಕೃತ ಉಪನ್ಯಾಸಕಾರದ ಶ್ರೀ ಶ್ರೀಶಕುಮಾರ್ ಇವರು ಮುಖ್ಯ ಅತಿಥಿಯಾಗಿ ಆಗಮಿಸಿ, ಎಲ್ಲವನ್ನು ಮನುಷ್ಯ ತನ್ನ ನಿಯಂತ್ರಣದಲ್ಲಿಡಲು ಬಯಸುತ್ತಾನೆ, ಅದೇ ರೀತಿ ಪರಿಸರವನ್ನು ಕೂಡ. ಆದರೆ ಕೆಲವೊಮ್ಮೆ ಪ್ರಕೃತಿಯೇ ಮನುಷ್ಯನಿಗೆ ಪಾಠ ಕಲಿಸುತ್ತದೆ. ಪ್ರಕೃತಿ ಸಹಜ ನಿಯಮಗಳನ್ನು ಮನುಷ್ಯ ಗೌರವಿಸಿದಲ್ಲಿ ಉತ್ತಮ ಪರಿಸರವನ್ನು ಮುಂದಿನ ಪೀಳಿಗೆ ನೋಡಲು ಸಾಧ್ಯ ಮತ್ತು ಅದರ ಅವಶ್ಯಕತೆಯೂ ಬಹಳಷ್ಟಿದೆ ಎಂದು ನುಡಿದರು,

ಆ ದಿನದಂದು ಎಲ್ಲಾ ವಿದ್ಯಾರ್ಥಿಗಳು ಒಂದೊಂದು ಗಿಡದ ಬೀಜವನ್ನು ಬಿತ್ತುವ ಕಾರ್ಯದಲ್ಲಿ ತೊಡಗಿಸಿಕೊಂಡು ಅರ್ಥಪೂರ್ಣವಾಗಿ ಪರಿಸರ ದಿನಾಚರಣೆಯನ್ನು ಆಚರಿಸಿದರು. ಸಂಸ್ಥೆಯ ಪ್ರಾಂಶುಪಾಲರು, ಉಪನ್ಯಾಸಕರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಸಂಘದ ನಿರ್ದೇಶಕಿಯಾದ ಶ್ರೀಮತಿ ಲೀಲಾವತಿ (ಅರ್ಥಶಾಸ್ತ್ರ ಉಪನ್ಯಾಸಕಿ) ಸ್ವಾಗತಿಸಿ, ವಿದ್ಯಾರ್ಥಿನಿ ಸಿಂಧುಶ್ರೀ ವಂದಿಸಿದರು.

### ಬರಹಗಾರರಿಗಾಗಿ ಮಾಹಿತಿ ಕಾರ್ಯಾಗಾರ



25–06–2012ರಂದು **"ಬರವಣಿಗೆ ಏಕೆ? ಹೇಗೆ?"** ಎಂಬ ವಿಷಯದ ಕುರಿತು ರಾಷ್ಟ್ರೀಯ ವಿಚಾರಗಳ ಮಾಸಪತ್ರಿಕೆಯಾದ **ಅಸೀಮಾ** ಇದರ ಸಂಪಾದಕರಾದ ಶ್ರೀ ನಾರಾಯಣ ಶೇವಿರೆಯವರು ತಿಳಿಸಿಕೊಟ್ಟರು. ಪತ್ರಿಕೆಗೆ ಕಳುಹಿಸುವ ಬರಹಗಳು ಹೇಗಿರಬೇಕು? ಅಲ್ಲಿನ ವಿಧಗಳು ಗಮನಿಸಬೇಕಾದ ಅಂಶಗಳ ಬಗ್ಗೆ ಶ್ರೀಯುತರು ತಿಳಿಸಿಕೊಟ್ಟರು. ಯುವ ಬರಹಗಾರರಿಗೆ ಪ್ರೇರಣೆ–ಯ ಮಾತುಗಳನ್ನಾಡಿದರು. 28 ಬರಹ ಆಸಕ್ತ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಹಾಜರಿದ್ದರು. ಕನ್ನಡ ಉಪನ್ಯಾಸಕರಾದ ಶ್ರೀ ಮಹೇಶ್ ನೆಟ್ಲ ಅತಿಥಿಯನ್ನು ಪರಿಚಯಿಸಿ ಸ್ವಾಗತಿಸಿದರು.

### ಗಾಯನ ಆಸಕ್ತರಿಗಾಗಿ ತರಬೇತಿ

ಗಾಯನ ಆಸಕ್ತರಾಗಿ ದಿನಾಂಕ:25–06–2012 ರಂದು ಕಾರ್ಯಕ್ರಮವೊಂದನ್ನು ಹಮ್ಮಿಕೊಳ್ಳಲಾಗಿತ್ತು. ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಾಂತ ಸಹಘೋಷ್ ಪ್ರಮುಖರಾದ ಶ್ರೀ. ನ. ನಾಗರಾಜ್ ಇವರು ಈ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಗೀತಭಾರತಿ ಧ್ವನಿಮುದ್ರಿಕೆಗಳಿಗೆ ಕಂಠದಾನ ಮಾಡಿರುವ ಶ್ರೀಯುತರು ಗಾಯನ ಆಸಕ್ತ ವಿದ್ಯಾರ್ಥಿಗಳಿಗೆ ಸಂಗೀತದ ಮಹತ್ವದ ಕುರಿತು ತಿಳಿಸಿಕೊಟ್ಟರು. ದೇಶಭಕ್ತಿಗೀತೆ, ಭಾವಗೀತೆ, ಭಜನೆ ಹಾಡುಗಳನ್ನು ಅಭ್ಯಾಸ ಮಾಡಿಸಿದರು. ಪ್ರಾಂಶುಪಾಲರಾದ ಶ್ರೀ ಕೃಷ್ಣಪ್ರಸಾದ್, ಉಪನ್ಯಾಸಕರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.




## "ಆಗತ–ಸ್ವಾಗತ"

ದಿನಾಂಕ 20.06.2012ನೇ ಬುಧವಾರದಂದು ಶ್ರೀರಾಮ ಪದವಿ ಪೂರ್ವ ವಿದ್ಯಾಲಯದಲ್ಲಿ ಪ್ರಥಮ ಪಿಯುಸಿ ವಿದ್ಯಾರ್ಥಿಗಳ ಪ್ರವೇಶೋತ್ಸವ "ಆಗತ–ಸ್ವಾಗತ" ನಡೆಯಿತು. ವಿದ್ಯಾರ್ಥಿಗಳಿಗೆ ವಿದ್ಯಾಕೇಂದ್ರದ ಸಂಚಾಲಕರಾದ ಡಾ| ಪ್ರಭಾಕರ ಭಟ್, ವಿವೇಕಾನಂದ ವಿದ್ಯಾವರ್ಧಕ ಸಂಘ ಪುತ್ತೂರಿನ ಆಡಳಿತ ನಿರ್ದೇಶಕರಾದ ಶ್ರೀ ಬಲರಾಮ ಆಚಾರ್ಯ ಮತ್ತು ಮಂಗಳೂರಿನ ಉದ್ಯಮಿ ವೇದವ್ಯಾಸ ಕಾಮತ್ ಇವರು ತಿಲಕಧಾರಣೆ ಮಾಡಿ ಆಶೀರ್ವದಿಸಿದರು. ತಿಲಕಧಾರಣೆ ಮತ್ತು ನಮಸ್ಕಾರದ ಮಹತ್ವದ ಕುರಿತು ಸಂಚಾಲಕರು ಮಾತನಾಡುತ್ತಾ ಹಣ ಪ್ರಧಾನಕ್ಕಿಂತ ಗುಣಪ್ರಧಾನವಾದ ಶಿಕ್ಷಣ ನಮ್ಮ ಸಂಸ್ಥೆಯಲ್ಲಿ ನೀಡುತ್ತಿರುವುದು ಹೆಮ್ಮೆ ತಂದಿದೆ ಎಂದರು. ಅತಿಥಿಗಳಾದ ಬಲರಾಮ ಆಚಾರ್ಯರು ಮಾತನಾಡುತ್ತಾ, ತಿಲಕಧಾರಣೆ ಎನ್ನುವುದು ನಮ್ಮ ಸಂಸ್ಕೃತಿ ಅದರ ಮೂಲಕ ವಿದ್ಯಾರ್ಥಿಗಳನ್ನು ಸ್ವಾಗತಿಸುವ ಹಾಗೂ ಆ ಮೂಲಕ ನಮ್ಮ ಸಂಸ್ಕೃತಿಯನ್ನು ಮುಂದಿನ ಪೀಳಿಗೆಗೆ ತಿಳಿಸುವ ಕೆಲಸ ಶ್ಲಾಘನೀಯ ಎಂದರು.

ವೇದಿಕೆಯಲ್ಲಿ ಶ್ರೀರಾಮ ವಿದ್ಯಾಕೇಂದ್ರದ ಅಧ್ಯಕ್ಷರಾದ ಶ್ರೀ ನಾರಾಯಣ ಸೋಮಯಾಜಿ, ಡಾ| ಕಮಲಾ ಪ್ರ. ಭಟ್, ಪ್ರಾಂಶುಪಾಲರಾದ ಶ್ರೀ ಕೃಷ್ಣಪ್ರಸಾದ ಉಪಸ್ಥಿತರಿದ್ದು, ಅತಿಥಿಗಳನ್ನು ಸ್ವಾಗತಿಸಿ, ಬಬಿತಾ(ದ್ವಿ. ವಾಣಿಜ್ಯ) ವಂದಿಸಿ, ಅಭಿಷೇಕ್ ಆಚಾರ್ಯ(ದ್ವಿ. ವಿಜ್ಞಾನ) ನಿರೂಪಿಸಿದರು.




## ವಿಶೇಷ ಉಪನ್ಯಾಸ : ಪ್ರಾರ್ಥನೆಯ ಮಹತ್ವ

ದಿನಾಂಕ 12–06–2012ರ ಮಂಗಳವಾರದಂದು ಅಪರಾಹ್ನ 2–30 ರಿಂದ 4–00 ರ ತನಕ ಶ್ರೀರಾಮ ಪದವಿ ಪೂರ್ವ ವಿದ್ಯಾಲಯದ ಸಭಾಭವನದಲ್ಲಿ ಪ್ರಾರ್ಥನೆಯ ಮಹತ್ವದ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಉಪನ್ಯಾಸವನ್ನು ಕಳೆಕೋಡಿ ಸೂರ್ಯನಾರಾಯಣ ಭಟ್ ಇವರು ನಡೆಸಿಕೊಟ್ಟರು. ಸರಸ್ವತಿ ವಂದನೆ, ಗಾಯತ್ರಿ ಮುಂತಾದ ಮಂತ್ರಗಳ ಅರ್ಥ, ಅವುಗಳ ಶಕ್ತಿ, ಉಗಮಗಳ ಬಗ್ಗೆ ಶ್ರೀಯುತರು ಮಾತನಾಡುತ್ತ, "ಗಾಯತ್ರಿ ಮಂತ್ರ" ಅತ್ಯಂತ ಪವಿತ್ರವಾದದ್ದು ದಿನನಿತ್ಯ ಇದರ ಪಠಣದಿಂದ ಆತ್ಮಸ್ಥೈರ್ಯ ಹೆಚ್ಚುತ್ತದೆ. ಇದು ಉಳಿದೆಲ್ಲಾ ಮಂತ್ರಗಳಿಗಿಂತ ಶ್ರೇಷ್ಠ ಎಂದರು. ಕಾಲೇಜಿನ ಉಪಪ್ರಾಂಶುಪಾಲರಾದ ಶ್ರೀ ವಸಂತ ಬಲ್ಲಾಳರು ಸ್ವಾಗತಿಸಿ, ರಸಾಯನಶಾಸ್ತ್ರ ವಿಭಾಗದ ಉಪನ್ಯಾಸಕರಾದ ಶ್ರೀ ಗಿರೀಶ್ ಕುಮಾರ್ ವಂದಿಸಿದರು.




## ವಿದ್ಯಾರ್ಥಿ ಸಂಘದ ಉದ್ಘಾಟನೆ :

ದಿನಾಂಕ 30–06–2012 ರ ಶನಿವಾರ ಪೂರ್ವಾಹ್ನ 9–00 ಗಂಟೆಗೆ ಅಜಿತಕುಮಾರ ಸಭಾಭವನದಲ್ಲಿ ಶ್ರೀರಾಮ ಪ.ಪೂ.ವಿದ್ಯಾಲಯದ ವಿದ್ಯಾರ್ಥಿ ಸಂಘದ ಉದ್ಘಾಟನೆ ಮತ್ತು ಪ್ರತಿಜ್ಞಾ ವಿಧಿ ಸ್ವೀಕಾರ ಕಾರ್ಯಕ್ರಮ ನಡೆಯಿತು. ದ.ಕ.ಜಿಲ್ಲಾ ಭಾ.ಜ.ಪ.ದ ಅಧ್ಯಕ್ಷರಾದ ಶ್ರೀ ಪದ್ಮನಾಭ ಕೊಟ್ಟಾರಿಯವರು ಸಂಘವನ್ನು ಉದ್ಘಾಟಿಸಿ ಮಾತನಾಡುತ್ತಾ, ಸೋಲೇ ಗೆಲುವಿನ ಸೋಪಾನವೆಂಬುದು ಬಹುಪ್ರಸಿದ್ಧವಾದ ಉಕ್ತಿಯೇ ಆದರೂ ಗೆಲುವಿನ ನಂತರದ ಮೈಮರೆವು ಪುನಃ ಸೋಲಿಗೂ ಕಾರಣವಾಗಬಹುದು ಎಂದು ನುಡಿದರು.

ಇನ್ನೋರ್ವ ಅತಿಥಿಯಾದ ಬಿ.ಸಿ.ರೋಡಿನ ನ್ಯಾಯವಾದಿ ಶ್ರೀ ಪ್ರಸಾದ್ ಕುಮಾರ್ ಇವರು ಯಾವ ರೀತಿ ನಮ್ಮ ಬೆರಳುಗಳು ಬೇರೆ ಬೇರೆ ರೀತಿಯಿದ್ದರೂ ಮನಸ್ಸಿನ ನಿರ್ದೇಶನದಂತೆ ಕೆಲಸ ಮಾಡಬೇಕಾದಾಗ ಹೇಗೆ ಒಗ್ಗೂಡುತ್ತದೆಯೋ ಅದೇ ರೀತಿ ಕಾಲೇಜಿನ ವಿವಿಧ ಸಂಘಗಳು ಸಂಸ್ಥೆಯ ನಿರ್ದೇಶನದಂತೆ ಕೆಲಸ ಮಾಡಲು ಒಗ್ಗೂಡಬೇಕಾಗಿದೆ ಎಂದರು.

ಈ ವಿದ್ಯಾರ್ಥಿ ಸಂಘದ ಪದಾಧಿಕಾರಿಗಳನ್ನು ದಿನಾಂಕ 25–06–2012 ರ ಸೋಮವಾರದಂದು ಚುನಾವಣೆಯ ಮೂಲಕ ಆಯ್ಕೆ ಮಾಡಲಾಯಿತು. ಅಧ್ಯಕ್ಷನಾಗಿ ದ್ವಿತೀಯ ವಾಣಿಜ್ಯ (ಬಿ) ವಿಭಾಗದ ಸ್ವಸ್ತಿಕ್, ಕಾರ್ಯದರ್ಶಿಯಾಗಿ ದ್ವಿತೀಯ ವಿಜ್ಞಾನ ವಿಭಾಗದ ಸಿಂಧುಶ್ರೀ ಬಳ್ಳುಕ್ಕುರಾಯ ಹಾಗೂ ಜತೆಕಾರ್ಯದರ್ಶಿಯಾಗಿ ದ್ವಿತೀಯ ವಾಣಿಜ್ಯ (ಬಿ) ವಿಭಾಗದ ಸಹನಾ ಇವರು ಆಯ್ಕೆಯಾದರು. ಇದೇ ಸಂದರ್ಭದಲ್ಲಿ ಕಾಲೇಜಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿವಿಧ ಸಂಘಗಳಾದ ಸಾಂಸ್ಕೃತಿಕ, ವಿಜ್ಞಾನ, ಕ್ರೀಡಾ, ಸಂಸ್ಕೃತ, ಸಾಹಿತ್ಯ ಹಾಗೂ ಸಾಹಸಿಗರ ಸಂಘಗಳ ಅಧ್ಯಕ್ಷ ಮತ್ತು ಕಾರ್ಯದರ್ಶಿಗಳನ್ನು ನಾಮ ನಿರ್ದೇಶನದ ಮೂಲಕ ಆಯ್ಕೆ ಮಾಡಲಾಯಿತು. ಪ್ರಾಂಶುಪಾಲರು ಪ್ರಮಾಣವಚನ ಬೋಧಿಸಿದರು. ಶ್ರೀ ಕರುಣಾಕರ ಸ್ವಾಗತಿಸಿ, ಶ್ರೀಮತಿ ಗಾಯತ್ರಿ ಇವರು ವಂದಿಸಿದರು. ಗಣಿತಶಾಸ್ತ್ರದ ಉಪನ್ಯಾಸಕಿ ಜಯಲಕ್ಷ್ಮಿ ಕೆ. ಇವರು ನಿರೂಪಿಸಿದರು.

## ಭಜನಾ ಕಾರ್ಯಕ್ರಮ :

ಶ್ರೀರಾಮ ಪ.ಪೂ. ವಿದ್ಯಾಲಯದ ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದ ವತಿಯಿಂದ ಜೂನ್ ತಿಂಗಳ ಭಜನಾ ಕಾರ್ಯಕ್ರಮವು ದಿನಾಂಕ 29–06–2012ನೇ ಶುಕ್ರವಾರ ಅಜಿತಕುಮಾರ ಸಭಾಭವನದಲ್ಲಿ ನಡೆಯಿತು. ಎಲ್ಲಾ ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಆಸಕ್ತಿಯಿಂದ ಪಾಲ್ಗೊಂಡರು.

# ಪದವಿ ವಿಭಾಗ

## ಆಗತ ಸ್ವಾಗತ

ಶ್ರೀರಾಮ ಪದವಿ ಮಹಾವಿದ್ಯಾಲಯ ಕಲ್ಲಡ್ಕ ಇದರ 2012–13ನೇ ಶೈಕ್ಷಣಿಕ ವರ್ಷದ ಪ್ರಥಮ ಪದವಿಯ ವಿದ್ಯಾರ್ಥಿಗಳನ್ನು ಸ್ವಾಗತಿಸುವ 'ಆಗತ ಸ್ವಾಗತ' ಎಂಬ ಸಾಂಪ್ರದಾಯಿಕ ಕಾರ್ಯಕ್ರಮ 23.06.2012ನೇ ಶನಿವಾರದಂದು ಕಾಲೇಜಿನ ಅಜಿತಕುಮಾರ ಸಭಾಭವನದಲ್ಲಿ ಜರಗಿತು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಮಂಗಳೂರು ವಿಶ್ವವಿದ್ಯಾಲಯದ ಮುಖ್ಯ ಗ್ರಂಥಪಾಲಕರಾದ ಡಾ| ಎಂ.ಕೆ. ಬಂಡಿ ಇವರು ಮಾತನಾಡಿ, "ಅಂಕಗಳ ಜತೆಗೆ ಜ್ಞಾನಾರ್ಜನೆ, ಚಿಂತನಾಶೀಲ ಮನೋಭಾವನೆಯನ್ನು ಬೆಳೆಸಿ, ಭಾರತ ದೇಶದ ಶಿಕ್ಷಣ ವ್ಯವಸ್ಥೆಯನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು" ಎಂದರು.

ಸಂಸ್ಥೆಯ ಸಂಚಾಲಕರಾದ ಡಾ| ಪ್ರಭಾಕರ ಭಟ್ ಮಾತನಾಡಿ, "ಧರ್ಮ, ಸಂಸ್ಕೃತಿ ಮತ್ತು ಜೀವನ ಮೌಲ್ಯಗಳ ಜತೆಗೆ ಮುನ್ನಡೆಯುತ್ತಿರುವ ನಮ್ಮ ದೇಶವು ಶ್ರದ್ಧೆ, ಪ್ರಾಮಾಣಿಕತೆಗೆ ಹೆಸರುವಾಸಿ" ಎಂದರು.

ಅತಿಥಿಗಳಾಗಿ ಆಗಮಿಸಿದ ಪುತ್ತೂರಿನ ಪಿ.ಡಬ್ಲ್ಯೂ.ಡಿ ಇದರಲ್ಲಿ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಶ್ರೀಯುತ ಎಲ್. ಶಿವಕುಮಾರ್, ಮಂಗಳೂರು ಮಾಯಾ ಟ್ರೇಡರ್ಸ್‌ನ ಮಾಲಕರಾದ ಶ್ರೀಯುತ ಅನಂತ ಕಾಮತ್, ಬಿ.ಸಿರೋಡ್ ಪ್ರಥಮ ದರ್ಜೆ ಕಾಲೇಜಿನ ಕನ್ನಡ ಉಪನ್ಯಾಸಕರಾದ




ಡಾ| ಅಜಕ್ಕಳ ಗಿರೀಶ್ ಭಟ್ ಹಾಗೂ ರೇಶ್ಮಾ ಗಿರೀಶ್ ಭಟ್ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು.

ಸಂಸ್ಥೆಯ ಅಧ್ಯಕ್ಷರಾದ ಶ್ರೀಯುತ ನಾರಾಯಣ ಸೋಮಯಾಜಿ ಹಾಗೂ ಕಮಲಾ ಪ್ರಭಾಕರ ಭಟ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ತೃತೀಯ ಬಿ.ಕಾಂ.ನ ವಿಶೇಷ್ ಸ್ವಾಗತಿಸಿ, ದ್ವಿತೀಯ ಬಿ.ಕಾಂನ ರಶ್ಮಿ ಧನ್ಯವಾದಗೈದರು. ದ್ವಿತೀಯ ಬಿ.ಬಿ.ಯಂನ ಪ್ರಣೀತಾ ಕಾರ್ಯಕ್ರಮ ನಿರೂಪಿಸಿದರು.



## ವಿಶೇಷ ಉಪನ್ಯಾಸ:– ಮಿಲಿಟರಿ ಸೇವೆಯಲ್ಲಿನ ಅವಕಾಶಗಳು

ದಿನಾಂಕ 27–06–2012 ರ ಬುಧವಾರದಂದು ಕಾಲೇಜಿನ ಅಜಿತಕುಮಾರ ಸಭಾಂಗಣದಲ್ಲಿ ಶ್ರೀರಾಮ ಪದವಿ ಮತ್ತು ಪದವಿ ಪೂರ್ವ ವಿದ್ಯಾರ್ಥಿಗಳಿಗೆ ಜಂಟಿಯಾಗಿ "ಮಿಲಿಟರಿ ಸೇವೆಯಲ್ಲಿನ ಅವಕಾಶಗಳು ಮತ್ತು ಅರ್ಹತೆಗಳು" ಎಂಬ ವಿಷಯದ ಕುರಿತು ಮಾಹಿತಿಯನ್ನೊದಗಿಸುವ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಭಾರತದ ವಾಯುಸೇನೆಯಲ್ಲಿ 15 ವರ್ಷಗಳ ಕಾಲ ಅಧಿಕಾರಿಯಾಗಿ ಸೇವೆ ಸಲ್ಲಿಸಿದ ವಿಟ್ಲದ ಶ್ರೀ ಶ್ರೀಪ್ರಕಾಶ್ ಇವರು ಈ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಮಿಲಿಟರಿ ಸೇವೆಯಲ್ಲಿನ ಅವಕಾಶಗಳು, ಸೇರಲು ಬೇಕಾದ ಅರ್ಹತೆಗಳು ಅದರ ಪ್ರಕ್ರಿಯೆ ಹೇಗೆ? ಅಲ್ಲಿ ಸಿಗುವ ಸವಲತ್ತುಗಳ ಬಗ್ಗೆ ಶ್ರೀಯುತರು ವಿವರವಾಗಿ ತಿಳಿಸಿದರು. ದೇಶರಕ್ಷಣೆ ಪ್ರತಿಯೊಬ್ಬನ ಕರ್ತವ್ಯ. ಅದನ್ನು ತಾನು ನಿರ್ವಹಿಸುತ್ತಿದ್ದೇನೆ ಎನ್ನುವ ತೃಪ್ತಿ, ಹಣ, ಸಮಾಜದಲ್ಲಿ ಗೌರವ ದೊರೆಯುವಲ್ಲಿ ಯಾವುದೇ ಅನುಮಾನ ಇಲ್ಲ. ಕೇವಲ ಪುಸ್ತಕ ಓದಿ ಭಾರತವನ್ನು ನಾವು ಕಲ್ಪಿಸಿಕೊಳ್ಳುತ್ತೇವೆ. ಆದರೆ ಮಿಲಿಟರಿಯಲ್ಲಿರುವವರಿಗೆ ಪ್ರತ್ಯಕ್ಷವಾಗಿ ಭಾರತವನ್ನು ನೋಡುವ ಅವಕಾಶವಿದೆ ಎಂದು ತಮ್ಮ ಅನುಭವದ ಪುಟಗಳನ್ನು ತೆರೆದಿಟ್ಟರು. ಪದವಿ ವಿಭಾಗದ ಉಪಪ್ರಾಂಶುಪಾಲರಾದ ಶ್ರೀಮತಿ ಕಾತ್ಯಾಯಿನಿ ಇವರು ವೇದಿಕೆಯಲ್ಲಿ ಉಪಸ್ಥಿತರಿದ್ದು, ಸ್ವಾಗತಿಸಿದರು. ಅಂತಿಮ ಬಿ.ಕಾಂ ವಿದ್ಯಾರ್ಥಿ ಸಚಿನ್ ಕುಮಾರ್ ವಂದಿಸಿದರು.

**ಚಿತ್ರ ಶೀರ್ಷಿಕೆ 1ರ ಬಹುಮಾನಿತ ಬರಹ**

**ಮನೆಯೊಳಗಿಲ್ಲ ಈ ಆನಂದ, ಕ್ಷಣಕಾಲ ಇರುವ ಹೀಗೆ ಸುಖದಿಂದ**



ಒಟ್ಟು ಪ್ರತಿಕ್ರಿಯೆ ನೀಡಿದವರು : 22
ಬಹುಮಾನಿತರು :
ಪ್ರಶಾಂತ ರಾಮನಗರ (ಹಿರಿಯ ವಿದ್ಯಾರ್ಥಿ)



ಈ ಚಿತ್ರಕ್ಕೆ ಶೀರ್ಷಿಕೆಯನ್ನು ಕಳುಹಿಸಿಕೊಡಿ.
ವಿದ್ಯಾರ್ಥಿಗಳು ಆಯಾ ವಿಭಾಗದಲ್ಲಿ ಇಟ್ಟಿರುವ ಸರಯೂ ಪೆಟ್ಟಿಗೆಯಲ್ಲಿ ಉತ್ತರಗಳನ್ನು ಬರೆದುಹಾಕಿ.

# 2012-13ನೇ ಸಾಲಿನ ದಾಖಲಾತಿ ವಿವರ

| ವಿಭಾಗ | ವಿದ್ಯಾರ್ಥಿಗಳು | | | ಶಿಕ್ಷಕರು | ಶಿಕ್ಷಕೇತರರು |
|---|---|---|---|---|---|
| | ಗಂಡು | ಹೆಣ್ಣು | ಒಟ್ಟು | | |
| **ಶಿಶುಮಂದಿರ** | | | | | |
| ಶ್ರೀರಾಮ ಕಲ್ಲಡ್ಕ | 42 | 45 | 87 | 3 | 2 |
| ಶ್ರೀಕೃಷ್ಣ ಸಜಿಪ | 08 | 10 | 18 | 1 | 1 |
| ಶ್ರೀಗಣೇಶ ಬೊಂಡಾಲ | 09 | 08 | 17 | 1 | 1 |
| ಒಟ್ಟು | 59 | 63 | 122 | 5 | 4 |
| **ಶ್ರೀರಾಮ ಪ್ರಾಥಮಿಕ ಶಾಲೆ** | | | | | |
| 1ನೇ ತರಗತಿ | 52 | 45 | 97 | 22 | |
| 2ನೇ ತರಗತಿ | 39 | 35 | 74 | | |
| 3ನೇ ತರಗತಿ | 29 | 39 | 68 | | |
| 4ನೇ ತರಗತಿ | 60 | 40 | 100 | | |
| 5ನೇ ತರಗತಿ | 46 | 57 | 103 | | |
| 6ನೇ ತರಗತಿ | 55 | 55 | 110 | | |
| 7ನೇ ತರಗತಿ | 54 | 64 | 118 | | |
| ಒಟ್ಟು | 335 | 335 | 670 | | |
| **ಶ್ರೀರಾಮ ಪ್ರೌಢಶಾಲೆ** | | | | | |
| 8ನೇ ತರಗತಿ | 122 | 128 | 250 | 30 | 4 |
| 9ನೇ ತರಗತಿ | 122 | 149 | 271 | | |
| 10ನೇ ತರಗತಿ | 134 | 157 | 291 | | |
| ಒಟ್ಟು | 378 | 434 | 812 | | |
| **ಶ್ರೀರಾಮ ಪದವಿಪೂರ್ವ ವಿದ್ಯಾಲಯ** | | | | | |
| ಪ್ರಥಮ ಪಿಯುಸಿ ಕಲಾ | 40 | 36 | 76 | 20 | 7 |
| ವಾಣಿಜ್ಯ | 74 | 85 | 159 | | |
| ವಿಜ್ಞಾನ | 24 | 30 | 54 | | |
| ದ್ವಿತೀಯ ಪಿಯುಸಿ ಕಲಾ | 22 | 20 | 42 | | |
| ವಾಣಿಜ್ಯ | 41 | 85 | 126 | | |
| ವಿಜ್ಞಾನ | 19 | 40 | 59 | | |
| ಒಟ್ಟು | 220 | 296 | 516 | | |
| **ಶ್ರೀರಾಮ ಪ್ರಥಮ ದರ್ಜೆ ಮಹಾವಿದ್ಯಾಲಯ** | | | | | |
| ಪ್ರಥಮ ಬಿ.ಕಾಂ | 26 | 42 | 68 | 12 | 2 |
| ದ್ವಿತೀಯ ಬಿ.ಕಾಂ. | 20 | 40 | 60 | | |
| ತೃತೀಯ ಬಿ.ಕಾಂ. | 12 | 28 | 40 | | |
| ಬಿ.ಬಿ.ಎಂ. | 19 | 31 | 50 | | |
| ಒಟ್ಟು | 77 | 131 | 208 | | |

## ಶ್ರೀರಾಮ ವಸತಿ ನಿಲಯ

| ವಿಭಾಗ | ಬಾಲಕರು | ಬಾಲಕಿಯರು | ಒಟ್ಟು | ವಸತಿಪಾಲಕರು |
|---|---|---|---|---|
| ಪ್ರಾಥಮಿಕ | 27 | 48 | 75 | 4 |
| ಪ್ರೌಢ | 37 | 13 | 50 | |
| ಪದವಿಪೂರ್ವ | 48 | 21 | 69 | |
| ಪದವಿ | 6 | 5 | 11 | |
| ಒಟ್ಟು | 98 | 87 | 185 | |

**ವ್ಯವಸ್ಥಾಪನಾ ವಿಭಾಗ = 20**
(ಪ್ರಬಂಧಕರು, ಸಹಾಯಕರು, ಅಡುಗೆ, ಸ್ವಚ್ಛತೆ, ಬಸ್ ಚಾಲಕರು, ನಿರ್ವಾಹಕರು, ದಾಸ್ತಾನು ಮತ್ತಿತರ)

**ಹೊರರಾಜ್ಯದ ವಿದ್ಯಾರ್ಥಿಗಳು = 102**
(ಮೇಘಾಲಯ, ಕೇರಳ, ಮಹಾರಾಷ್ಟ್ರ, ಗುಜರಾತ್)

**ಸಮಿತಿಗಳು = 5**

1. ಶ್ರೀರಾಮ ಶಿಶುಮಂದಿರ ವ್ಯವಸ್ಥಾಪನಾ ಸಮಿತಿ
2. ಶ್ರೀರಾಮ ಪ್ರಾಥಮಿಕ ಶಾಲಾಭಿವೃದ್ಧಿ ಸಮಿತಿ
3. ಶ್ರೀರಾಮ ಪ್ರೌಢಶಾಲಾ ಅಭಿವೃದ್ಧಿ ಸಮಿತಿ
4. ಚೈತನ್ಯ– ಹಿರಿಯ ವಿದ್ಯಾರ್ಥಿ ಸಂಘ
5. ಪಾಂಚಜನ್ಯ–ಹಿರಿಯ ವಿದ್ಯಾರ್ಥಿ ಸಂಘ

**ಶಾಲಾ ವಾಹನ ಸಂಚರಿಸುವ ಮಾರ್ಗಗಳು**

1. ಸಜೀಪ–ಚೇಳೂರು–ಬೋಳ್ಯಾರ್
2. ಬೋಳಂತೂರು–ಕುಕ್ಕಾಜೆ–ಇರಾ
3. ಬಿ.ಸಿ.ರೋಡು–ಬಂಟ್ವಾಳ–ಶಂಭೂರು
4. ಬರಿಮಾರು–ಮಾಣಿ–ಅನಂತಾಡಿ
5. ನಾರ್ಶ–ಮಾದಕಟ್ಟೆ–ವೀರಕಂಭ
6. ಅಮ್ಟೂರು–ಬೊಳ್ಳಾಯಿ–ಮೆಲ್ಕಾರ್



| ಒಟ್ಟು | 2458 |
|---|---|
| ಬಾಲಕರು | 1069 |
| ಬಾಲಕಿಯರು | 1259 |
| ಶಿಕ್ಷಕರು | 89 |
| ಶಿಕ್ಷಕೇತರರು | 21 |
| ವ್ಯವಸ್ಥಾಪಕರು | 20 |

"ಸರಯೂ" ಪತ್ರಿಕೆಯ ಬಗೆಗೆ ಹಾಗೂ ವಿದ್ಯಾಕೇಂದ್ರದ ಕಾರ್ಯಚಟುವಟಿಕೆಗಳ ಬಗ್ಗೆ ನಿಮ್ಮ ಅಭಿಪ್ರಾಯಗಳಿಗೆ ಸ್ವಾಗತ. ಈ ಪತ್ರಿಕೆಯ ಪೋಷಕರಾಗಬಯಸುವವರು ರೂ. 1000/–ದ ಡಿ.ಡಿ./ಚೆಕ್‌ನ್ನು ಶ್ರೀರಾಮ ವಿದ್ಯಾಕೇಂದ್ರ ಟ್ರಸ್ಟ್ ಹೆಸರಿನಲ್ಲಿ ಈ ಕೆಳಗಿನ ವಿಳಾಸಕ್ಕೆ ಕಳುಹಿಸಬಹುದು.

**ಸಂಪಾದಕರು, ಸರಯೂ**
ಶ್ರೀರಾಮ ವಿದ್ಯಾಕೇಂದ್ರ, ಹನುಮಾನ್ ನಗರ, ಕಲ್ಲಡ್ಕ, ದ.ಕ.–574 222.

ಸವಿಧೇ ತೆರೆದ ಅಂಚೆ

.................................................................................

.................................................................................

.................................................................................